ಬಂತು. ನಿಜವಾಗಿಯೂ ಹಿಂದಿನ ಬೀದಿಯ ಸುಭದ್ರಾ ಕಾಕು, ಮೂರನೇ ಮನೆಯ ಅನ್ನಪೂರ್ಣಕ್ಕ... ಎಲ್ಲರೂ ಅವರ ಜಾಣ್ಮೆಗೆ ಬೆರಗಾಗಿದ್ದರು. ಯಾರ ಮನೆಯಲ್ಲಿ ಕಾರ್ಯಕ್ರಮಗಳಿದ್ದರೂ ಸರಜಕ್ಕ ಸಹಾಯ ಹಸ್ತ ಚಾಚುತ್ತಿದ್ದರು. ವಸುಮತಿ, ಸುಮತಿ, "ಪುಷ್ಪಾ..." ಎಂದು ನನ್ನನ್ನು ಕೂಗುತ್ತ ಬರುತ್ತಿದ್ದರೆ ರವಿ ಹೊರಗೆ ನಿಂತು, "ಗುರು" ಎಂದು ಕೂಗುತ್ತಿದ್ದ. "ಒಳಗ ಬಾಪ್ಪಾ" ಎಂದರೆ ಮಾತ್ರ ಬರುತ್ತಿದ್ದ. ಚಿಕ್ಕವ ಚಂದ್ರು ಹಾಗಲ್ಲ. "ವಿಮಲಾ ಕಾಕು..." ಎನ್ನುತ್ತ ಅಡುಗೆ ಮನೆ, "ಗುರಣ್ಣಾ..." ಎನ್ನುತ್ತ ಅಟ್ಟ... ಒಟ್ಟು ಇಡೀ ಮನೆಯೆಲ್ಲ ಬೆಕ್ಕಿನಂತೆ ಸುತ್ತುತ್ತಿದ್ದ. ಕಾರಣವಿಲ್ಲದಿದ್ದರೂ ಆಗಾಗ್ಗೆ ಅವ್ವ, ಅಣ್ಣನ ಹೆಸರು ಹೇಳುತ್ತ ಸುತ್ತಾಡುವುದು ಅಪ್ಪ, ಗುರಣ್ಣ ಸಹಿಸುತ್ತಿರಲಿಲ್ಲ. ಅಮ್ಮ, "ಬಿಡ್ರಿ... ಪಾಪ ಸಣ್ಣಾಂವಂತ ಅಚ್ಛಾ ಆಗೇದ" ಎಂದು ಒಪ್ಪಿಟ್ಟುಕೊಳ್ಳುತ್ತಿದ್ದಳು.

ಅವರು ಬಂದ ಉದ್ದೇಶದಂತೆ ವರಶೋಧನೆ ಆರಂಭವಾಗಿ ಸುಮತಿಯ ಮದುವೆ ನಿಶ್ಚಯವಾಗಿತ್ತು. ತವರಿನ ಆಸರೆ ಜೋರಾಗೇ ಇತ್ತು ಸರಜಕ್ಕನಿಗೆ. ಚಕ್ಕಲಿ, ಉಂಡಿ, ಕರ್ಚಿಕಾಯಿ... ಮುಂತಾದ ಫರಾಳಗಳನ್ನು ಇಡೀ ಬೀದಿಯ ಜನ ಒಟ್ಟಾಗಿ ಮಾಡಿದ್ದರು. ನೆಂಟರಿಗೆ ನಮ್ಮಲ್ಲಿಯೇ ಸ್ನಾನ, ಮಲಗುವ ವ್ಯವಸ್ಥೆಯಾಗಿ ನಮ್ಮದೂ ಮದುವೆಮನೆಯಾದಂತಾಗಿತ್ತು. ಲಗ್ನ ಜೋರಾಗಿಯೇ ನಡೆದಿತ್ತು. ನಾವೂ ಓಡಾಡಿದ್ದೆವು. ಅವಳ ಮದುವೆಯಲ್ಲಿ ನೋಡಿದವರಾರೋ ವಸುಮತಿಯನ್ನು ಇಷ್ಟಪಟ್ಟಿದ್ದರು. ಒಳ್ಳೆಯ ಸಂಬಂಧ. ಅವಳ ಪರೀಕ್ಷೆ ಮುಗಿದಾಕ್ಷಣ ಮುಹೂರ್ತವಿಟ್ಟರು. ಆಗ ಸರಜಕ್ಕನಿಗೆ ಎಲ್ಲಕ್ಕೂ ಕಷ್ಟವಾಗಿತ್ತು. ದುಡ್ಡಿಗೂ ಸಹ. ಅದೇ ತಾನೇ ಒಂದು ಮದುವೆ ಮುಗಿದಿತ್ತಲ್ಲ... ಬಾಬೂರಾವ್ ಆಕಾಶದಲ್ಲೇ ಇದ್ದುದರಿಂದ ಎಲ್ಲ ವ್ಯವಸ್ಥೆಯೂ ಸರಜಕ್ಕನದೇ ಆಗಿತ್ತು. ಅಮ್ಮ ಅಪ್ಪನಿಗೆ ಹೇಳಿ ಎಲ್ಲೋ ಸಾಲ ಕೊಡಿಸಿದ್ದಳು. ಮತ್ತೆ ಅದೇ ರೀತಿಯಲ್ಲೇ ಎಲ್ಲ ಓಡಾಡಿ ಮದುವೆ ಮಾಡಿದ್ದರು. ಅಮ್ಮ ಮತ್ತವಳ ಗೆಳತಿಯರು ಸೇರಿ ರುಖ್ವೋತದ ಪಾತ್ರೆ ಸಾಮಾನು ಕೊಡಿಸಿದ್ದರು. ಸರಜಕ್ಕ ಅಮ್ಮನ ಕೈ ಹಿಡಿದು, "ಯಾವ ಜನ್ಮದಾಗ ನನ್ನ ಅಕ್ಕ ತಂಗಿ ಆಗಿದ್ರೋ ನನ್ನ ಪಾರು ಮಾಡಿದ್ರಿ" ಎಂದು ಕಣ್ತುಂಬಿದ್ದರು. ನಾನು ಮಣಿಗಳ ಸೋಫಾ ಸೆಟ್ಟು, ಗುಡಿ... ಇತ್ಯಾದಿಗಳನ್ನು ರುಖ್ವೋತದಲ್ಲಿಡಲು ಮಾಡಿಕೊಟ್ಟಿದ್ದೆ. ಹತ್ತನೇ ತರಗತಿಯ ಪರೀಕ್ಷೆ ಮುಗಿಸಿ ಕಾಲೇಜಿನ ಹೊಸ್ತಿಲಲ್ಲಿದ್ದವಳು ಸೀರೆಯುಟ್ಟು ಓಡಾಡಿದ್ದೆ. ನಾನೆಲ್ಲಿದ್ದರೂ ಚಂದ್ರು ಓಡಿಬರುತ್ತಿದ್ದ. ನೆಪ ಮಾಡಿಕೊಂಡು ಹಿಂದೆ ನಿಲ್ಲುತ್ತಿದ್ದ. ಅಪ್ಪ ಮತ್ತು ಗುರಣ್ಣನ ಕಣ್ಣುಗಳು ತೀಕ್ಷ್ಣವಾಗುತ್ತಿದ್ದವು. ಅವರಿಗೆ ಅವನ ಸ್ವಭಾವ ಸುತಾರಾಂ ಇಷ್ಟವಾಗುತ್ತಿರಲಿಲ್ಲ. ನನಗೆ...

ಯಾರಿಗೂ ಅರಿವಿಲ್ಲದಂತೆ ಅಲ್ಲೊಂದು ನವಿರಾದ ಪ್ರೇಮಕಥೆ ನಿಧಾನವಾಗಿ ಅರಳುತ್ತಿತ್ತು. ಅಪ್ಪನಂತೆಯೇ ಮುಖಲಕ್ಷಣಗಳುಳ್ಳ ಚಂದ್ರು ನೋಡಲು ರೂಪವಂತನಲ್ಲ. ಎಣ್ಣೆಗೆಂಪು ಬಣ್ಣವಾದರೂ ಆರಡಿ ಎತ್ತರದ ದೃಢಕಾಯ. ಅದಾವುದೋ ಪೈಲ್ವಾನನ ಬಳಿ ಒಂದಷ್ಟು ದಿನ ಸಾಮು ಹೊಡೆದು ಬೆವರಿಳಿಸಿದ್ದಕ್ಕೋ ಏನೋ ಮಾಂಸಖಂಡಗಳೆಲ್ಲ ಹುರಿಗಟ್ಟಿದ್ದವು. ಹದಿ ಹರೆಯ ಬೇರೆ. ಒಮ್ಮೆ ತಿರುಗಿ ನೋಡಬೇಕೆನ್ನಿಸುವಂಥ ಜಟ್ಟಿಯ ಮೈಕಟ್ಟು. ನಾನು ಆಕರ್ಷಣೆಗೆ ಒಳಗಾಗಿದ್ದು ನಿಜವೇ... ಕೃಷ್ಣೇಂದ್ರ ಸ್ವಾಮಿ ಮಠದಲ್ಲಿ ಏನೇ ಕಾರ್ಯಕ್ರಮಗಳಿದ್ದರೂ ಎಲ್ಲರೂ ಸೇವೆಗೆ ನಿಲ್ಲುತ್ತಿದ್ದುದುಂಟು. "ಏ ಪುಷ್ಪಾ... ನಾ ಧೊಡ್ಡ ಉಂಡಿ ಬುಟ್ಟಿ ತೊಗೊತೇನಿ. ನೀ ಬಡಿಸ್ಗೋತ ಹೋಗು" ಎನ್ನುತ್ತಿದ್ದ. "ಆ ಧೊಡ್ಡ ಪಾತೇಲಿ ಎತ್ತಬ್ಯಾಡಾ ಪುಷ್ಪಾ" ಎಂದು ಕಾಳಜಿ ಮಾಡುತ್ತಿದ್ದ. ನನಗೆ ಎದೆಯಲ್ಲೇನೋ ಪುಳಕ. ಅವನ ಗತ್ತಿನ ಮಾತುಗಳೂ ನನಗೆ ಇಷ್ಟವಾಗುತ್ತಿದ್ದವು. ಅಮ್ಮನೂ ಅಷ್ಟೇ... ಅವನಿಗಾಗಿ ಪೂರ್ತಿ ಸಡಿಲವಾಗಿದ್ದಳು. ಅಪ್ಪ, ಅಣ್ಣ ಮನೆಯಲ್ಲಿಲ್ಲದ ಸಮಯ ನೋಡಿಕೊಂಡು ಬರುತ್ತಿದ್ದವ, "ಗುರಣ್ಣಾ ಇದ್ದಾನಂತ ಬಂದೆ" ಎನ್ನುತ್ತ ನಂತರ, "ಪುಷ್ಪಾ..." ಎನ್ನುತ್ತಿದ್ದ. "ಮ್ಯಾಲಿದ್ದಾಳ ನೋಡು. ಹೋಗು..." ಎಂದು ಕಳಿಸುವ ಮಟ್ಟಿಗೆ ಅವಳಿಗೂ ಇಷ್ಟವಾಗಿದ್ದ. ನನ್ನೊಂದಿಗೆ ಹರಟೆ ಕೊಚ್ಚುತ್ತಿದ್ದ.